ಚಳಿಯ ಪ್ರಭಾವಳಿಗೆ ಹೆದರಿ ಎಲ್ಲರೂ ಬೆಚ್ಚನೆಯ ಸ್ವೆಟರ್ ಧರಿಸುವತ್ತ ಚಿತ್ತ ಹರಿಸಿದ್ದಾರೆ. ಚಳಿಗಾಲದಲ್ಲಿ ಮನೆಯಲ್ಲಿಯೇ ಬೆಚ್ಚನೆ ಇರಬೇಕು ಎಂದು ಮನಸ್ಸು ಬಯಸುತ್ತದೆ. ಸ್ಕೂಲ್, ಕಾಲೇಜು, ಕಚೇರಿಗೆ ಹೋಗುವವರು ಚಳಿಯಿಂದ ರಕ್ಷಣೆ ಮತ್ತು ತಮ್ಮ ಚರ್ಮದ ಆರೈಕೆ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ.

ಚಳಿಗಾಲದಲ್ಲಿ ಬೆಚ್ಚನೆಯ ಅನುಭವಕ್ಕೆ ಅನೇಕ ಬಗೆಯ ವಿವಿಧ ವಿನ್ಯಾಸದ ಸ್ವೆಟರ್‌ಗಳು ಬಂದಿದೆ. ಅದರಲ್ಲೂ ಎಲ್ಲಾ ಬಗೆಯ ಉಡುಪುಗಳಿಗೆ ಹೊಂದುವ ಸೂಕ್ತ ಸ್ವೆಟರ್‌ಗಳನ್ನು ತೊಟ್ಟರೆ ಅವರ ಅಂದ ಇನ್ನೂ ಇಮ್ಮಡಿಸುತ್ತದೆ. ಅಂತಹ ಅನೇಕ ವಿನ್ಯಾಸದ ಸ್ವೆಟರ್‌ಗಳು ಯಾವುವು?

### ಬಟನ್ ಇಲ್ಲದ ಸ್ವೆಟರ್

ಸಾಮಾನ್ಯವಾಗಿ ಬಟನ್ ಇಲ್ಲದ ಸ್ವೆಟರ್‌ಗಳನ್ನು ತೊಡುವುದನ್ನು ಕಾಣಬಹುದು. ಆದರೆ ಇಂತಹ ಸ್ವೆಟರ್‌ಗಳನ್ನು ಜೀನ್ಸ್, ಸ್ಕರ್ಟ್, ಶಾರ್ಟ್ಸ್, ಶರ್ಟ್ಸ್, ಟಿ ಶರ್ಟ್ಸ್, ಜಂಪ್ ಸೂಟ್, ಡ್ರೆಸ್ ಮತ್ತಿತರ ಉಡುಪುಗಳ ಮೇಲೆ ತೊಡಬಹುದು. ಟೀಶರ್ಟ್‌ನಂತೆಯೇ ಧರಿಸುವುದು ಈಗಿನ ಟ್ರೆಂಡ್ ಕೂಡ ಆಗಿದೆ.

### ಬಟರ್ ಸಹಿತ ಸ್ವೆಟರ್

ಬಟನ್ ಇರುವ ಸ್ವೆಟರ್‌ಗಳನ್ನು ಚೂಡಿದಾರ, ಸಲ್ವಾರ್ ಕಮೀಜ್ ಮತ್ತು ಲಂಗದ ಜೊತೆ ತೊಟ್ಟರೆ ಅಂದವಾಗಿ ಕಾಣಿಸುತ್ತದೆ.

### ಸೀರೆಗೂ ಸೈ

ಸೀರೆಗಳನ್ನು ತೊಡುವವರು ಸೀರೆಗಳಿಗೆ ಒಪ್ಪುವ ಸ್ವೆಟರ್‌ಗಳನ್ನು ಧರಿಸುವುದು ಸೂಕ್ತ. ಮದುವೆ, ಪೂಜೆ, ಹಬ್ಬ ಮತ್ತು ಇತರೆ ಯಾವುದೇ ಸಮಾರಂಭಕ್ಕೆ ಸೀರೆ ಉಡುವವರಾದರೆ ರವಿಕೆಯ ಬದಲಿಗೆ ಸೊಂಟದವರೆಗಿನ ಸ್ವೆಟರ್‌ಗಳನ್ನು ತೊಡಬಹುದು. ಉದ್ದದ ಮಖ್ಮಲ್ ಅಥವಾ ರೇಷ್ಮೆ ಜಾಕೆಟ್‌ಗಳನ್ನೇ ರವಿಕೆಯಂತೆ ತೊಟ್ಟರೆ ಚಳಿಯೂ ಆಗುವುದಿಲ್ಲ. ಬದಲಿಗೆ ಸ್ಟೈಲಿಷ್ ಆಗಿ ಕಾಣುವುದಲ್ಲದೆ ದಪ್ಪಗಿದ್ದರೆ ತೆಳ್ಳಗೆ ಅಂದವಾಗಿ ಕಾಣಿಸುತ್ತಾರೆ.

### ತರಾವರಿ ವಿನ್ಯಾಸ

ಸ್ವೆಟರ್‌ಗಳು ಅನೇಕ ಬಗೆಯ ವಿನ್ಯಾಸದಲ್ಲಿ ದೊರೆಯುತ್ತವೆ. ಉಣ್ಣೆಯಿಂದ ತಯಾರಾಗುವ ಸ್ವೆಟರ್‌ಗಳಲ್ಲಿ ಕ್ರಾಸ್ ಬಟನ್, ಲೇಸ್ ವರ್ಕ್, ಲಾಡಿ, ಜಿಪ್, ಬಕಲ್ ಮತ್ತಿತರ ಆಯ್ಕೆಗಳಲ್ಲಿ ಸಿಗುತ್ತವೆ. ಸಾಧಾರಣ ಸ್ವೆಟರ್ ಅನ್ನು ಸ್ಟೈಲಿಷ್ ಆಗಿಸಲು ಅದರ ಮೇಲೆ ಡೆನಿಮ್ ಬಟ್ಟೆಯ ಜೇಬು ಹೊಲಿಸಿ ಧರಿಸಿದರೆ ಚೆಂದವಾಗಿ ಕಾಣಿಸುತ್ತದೆ. ಟರ್ಟಲ್ ನೆಕ್ ಸ್ವೆಟರ್‌ನಲ್ಲಿ ಸೊಂಟದ ಭಾಗದಲ್ಲಿ ಸುಂದರವಾದ ಬೆಲ್ಟ್ ಅಳವಡಿಸಿದರೆ ಅಂದವಾಗಿ ಕಾಣಿಸುತ್ತದೆ.

ಬಿಗಿಯಾದ ಸ್ವೆಟರ್‌ಗಳಿಗೆ ಸಡಿಲ ತೋಳುಗಳನ್ನು ಇಡಬಹುದು. ಅಲ್ಲದೆ ತೋಳುಗಳಿಗೆ ಬಗೆ ಬಗೆಯ ಅಲಂಕಾರ ಮಾಡಿ ಸ್ವೆಟರ್‌ನ ಅಂದ ಹೆಚ್ಚಿಸಬಹುದು. ಬೆಲ್ ಬಾಟಮ್, ಪುಶ್ ಸ್ಲೀವ್, ರಫಲ್ಡ್ ಸ್ಲೀವ್, ಸ್ಲೈಡ್ ಸ್ಲಿಟ್ ಅಥವಾ ಎಂಬೆಲಿಶ್ಡ್ ಕಫ್ ಇರುವ ತೋಳುಗಳ ಸ್ವೆಟರ್‌ಗಳು ತರಾವರಿ ವಿನ್ಯಾಸದಲ್ಲಿ ಸಿಗುತ್ತದೆ, ಕ್ರಾಪ್ ಟಾಪ್, ಶ್ರಗ್, ಪಾಂಚೊ ಮತ್ತಿತರ ಪ್ರಕಾರದ ಸ್ವೆಟರ್‌ಗಳೂ ಫ್ಯಾಷನಬಲ್ ಆಗಿ ಇರುತ್ತದೆ.

ಮಕ್ಕಳಿಗೂ ಇಷ್ಟವೆನಿಸುವ ಪ್ರಾಣಿಗಳ ಚಿತ್ರವಿರುವ ಸ್ವೆಟರ್, ಬೊಂಬೆಗಳದ್ದು, ಕಾರ್ಟೂನ್ ಕ್ಯಾರೆಕ್ಟರ್ ಚಿತ್ರ ಇರುವ ಸ್ವೆಟರ್‌ಗಳು ಲಭ್ಯ. ಇವುಗಳಿಂದ ಧರಿಸಿ ಮಕ್ಕಳು ಇನ್ನಷ್ಟು ಮುದ್ದಾಗಿ ಕಾಣಬಹುದು.

### ಎಲ್ಲ ಕಾಲಕ್ಕೂ ಸೈ ಎನಿಸುವ ಸ್ವೆಟರ್

ಕೇವಲ ಚಳಿಗಾಲಕ್ಕೆ ಮಾತ್ರ ಸ್ವೆಟರ್‌ಗಳನ್ನು ತೊಡಬೇಕು ಅಂತೇನಿಲ್ಲ. ಉಡುಪಿಗೆ ಹೊಂದುವ ವಿನ್ಯಾಸದ ಸ್ಟೈಲಿಷ್ ಸ್ವೆಟರ್‌ಗಳನ್ನು ಯಾವ ಕಾಲದಲ್ಲೂ ಧರಿಸಬಹುದು. ಸ್ವೆಟರ್ ಅನ್ನೇ ಹೋಲುವ ಉಡುಪನ್ನು ಜಾಕೆಟ್‌ನಂತೆ ಮೈ ತುಂಬಾ ಆವರಿಸುವ ಕ್ರಾಪ್ ಬಟ್ಟೆಯನ್ನು ಬೇಸಿಗೆಯಲ್ಲೂ ಹಾಕಿಕೊಳ್ಳಬಹುದು. ಸ್ವೆಟರ್ ಯಾವುದೇ ಇರಲಿ ಪಾಶ್ಚಾತ್ಯ ಶೈಲಿಯ ಉಡುಗೆಗಳ ಮೇಲೆ ತೊಟ್ಟರೆ ಸೂಕ್ತ. ಆದರೆ ಈ ರೀತಿಯ ಉಡುಗೆ ಧರಿಸುವಾಗ ಮೇಕಪ್ ಕಡಿಮೆ ಮಾಡಿಕೊಳ್ಳುವುದು ಒಳಿತು.

### ಹೊಸತನ್ನು ತೊಟ್ಟು ನೋಡಿ

ಚಳಿಗಾಲ ಬಂತೆಂದರೆ ಮಾರುಕಟ್ಟೆಯಲ್ಲಿ ವಿವಿಧ ಬಗೆಯ ಹೊಸ ವಿನ್ಯಾಸ ಸ್ವೆಟರ್‌ಗಳು ಲಗ್ಗೆ ಇಡುತ್ತವೆ. ಜಾಕೆಟ್ ಅಥವಾ ಕೋಟ್‌ನಂತೆ ಕಾಣುವ ಸ್ವೆಟರ್‌ಗಳಿಗೆ ಕಾಲರ್ ಇರುತ್ತದೆ. ಪ್ಲಾಪಿ, ಸ್ಟ್ರೇಟ್, ಪೀಟರ್ ಪ್ಯಾನ್, ಟರ್ಟಲ್ ನೆಕ್, ಚೈನೀಸ್, ಫ್ಲಾಟ್, ರೋಲ್ಡ್ ಕಾಲರ್ ಇತ್ಯಾದಿ ಬಗೆಯ ಕಾಲರ್‌ಗಳಲ್ಲಿ ನಿಮಗೆ ಇಷ್ಟವಾಗುವುದನ್ನು ತೊಡಬಹುದು. ಉಣ್ಣೆಯಿಂದ ತಯಾರಾದ ಸ್ವೆಟರ್ ಮಾಡಲಾದ ಟ್ರೆಂಚ್ ಕೋಟ್ ಮಾದರಿಯ ಸ್ವೆಟರ್ ಹಾಗೂ ಡ್ರೆಸ್, ಹುಡಿ ಮಾದರಿಯ ಮೊಣಕಾಲಿನವರೆಗೂ ಇರುವ ಸ್ವೆಟರ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಅನೇಕ ಬಗೆಯ ಮಾದರಿ, ವಿನ್ಯಾಸದಲ್ಲಿ ಇರುವ ಸ್ವೆಟರ್‌ಗಳನ್ನು ತೊಟ್ಟು ಚಳಿಗಾಲವನ್ನು ಖುಷಿಯಿಂದ ಕಳೆಯಬಹುದು.



### ಚರ್ಮದ ರಕ್ಷಣೆ

ಚಳಿಗಾಲದಲ್ಲಿ ಅನಾರ್ಕಲಿ, ಚೂಡಿದಾರ, ಸಲ್ವಾರ್ ಕಮೀಜ್ ತೊಡುವಾಗ ಮೊಣಕಾಲಿನವರೆಗೂ ಇರುವ ಸ್ವೆಟರ್‌ಗಳನ್ನು ಧರಿಸುವುದು ಉತ್ತಮ. ಬಟ್ಟೆಯ ಇಡೀ ತೋಳುಗಳು ಮಖಮ್ಲ್ ಅಥವಾ ಖಾದಿ ಬಟ್ಟೆಯ ಕುರ್ತಿ ತೊಡುವುದರಿಂದ ಚಳಿಯಿಂದ ರಕ್ಷಣೆ ಸಿಗುತ್ತದೆ. ನಾವು ಯಾವುದೇ ಸ್ವೆಟರ್ ತೊಟ್ಟರೂ ಸ್ಟೈಲಿಷ್ ಜೊತೆಗೆ ಚರ್ಮದ ಆರೋಗ್ಯವೂ ಮುಖ್ಯವಾಗಿರುತ್ತದೆ.

ಮುಖ ಕೈ ಕಾಲುಗಳಿಗೆ ಮಾಯಿಶ್ಚರೈಸರ್, ಕೋಲ್ಡ್ ಕ್ರೀಂ ಹಚ್ಚಿಕೊಳ್ಳಬೇಕು. ಚರ್ಮ ಒಡೆಯುವ ಕಾರಣ ಜಿಡ್ಡಿನಂಶ ಇರುವ ಪದಾರ್ಥ ಬಳಸಬೇಕು.